# ಕರ್ನಾಟಕ ಸರ್ಕಾರದ ನಡವಳಿಕೆಗಳು

ವಿಷಯು : ಯುವ.ಕಾಂ ಯೋಜನೆಯಡಿ ತರಬೇತಿ ಕೇಂದ್ರಗಳನ್ನು ಕರ್ನಾಟಕ ರಾಜ್ಯ ವಿದ್ಯುನ್ಮಾನ ಅಭಿವೃದ್ಧಿ ನಿಗಮನಿಯಮಿತ, ಈ ಸಂಸ್ಥೆಯ ಸುಪರ್ದಿಗೆ ಮೂಲಭೂತ ಸೌಕರ್ಯಗಳೊಡನೆ ವರ್ಗಾಯಿಸುವ ಕುರಿತು – ಆದೇಶ ಓದಲಾಗಿದೆ:

೧. ಸರ್ಕಾರಿ ಆದೇಶ ಸಂಖ್ಯೆ : ಮಾತಂಇ 24 ನೀಸಂವಿ 2000 ದಿನಾಂಕ **06.12.2000** ಮತ್ತು **07.12..2000**
೨. ಸರ್ಕಾರಿ ಆದೇಶ ಸಂಖ್ಯೆ: ಮಾತಂಇ 04 ನೀಸಂವಿ 2000 ದಿನಾಂಕ **06.12.2005** ಮತ್ತು **20.10.2005.**
೩. ನಿರ್ದೇಶಕರು, ಮಾಹಿತಿ ತಂತ್ರ ಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಇಲಾಖೆ, ಇವರ ಪತ್ರ ಸಂಖ್ಯೆ: ಡಿಐಟಿ / ಯುವ.ಕಾಂ/1/2005-06 ದಿನಾಂಕ **08.01.2006.**

ಪ್ರಸ್ತಾವನೆ :

ಮೇಲೆ (1)ರಲ್ಲಿ ಓದಲಾದ ದಿನಾಂಕ **06.12..2000** ಮತ್ತು **07.12..2000**ರ ಸರ್ಕಾರಿ ಆದೇಶದಲ್ಲಿ "ಮಾಹಿತಿ" ಸಹಸ್ರಮಾನ ಮಾಹಿತಿ ತಂತ್ರಜ್ಞಾನ ನೀತಿಯಡಿ ಘೋಷಿಸಿದಂತೆ ರಾಜ್ಯದ ಎಲ್ಲಾ ವಿಧಾನಸಭಾ ಕ್ಷೇತ್ರಗಳಲ್ಲಿ ನಿರುದ್ಯೋಗ ವಿದ್ಯಾವಂತ ಯುವಕರಿಗೆ ಮಾಹಿತಿ ತಂತ್ರಜ್ಞಾನದಲ್ಲಿ ತರಬೇತಿ ನೀಡಲು ಅನುವಾಗುವಂತೆ ಯುವ.ಕಾಂ ಯೋಜನೆಯಡಿ ೨೨೫ ಯುವ.ಕಾಂ ತರಬೇತಿ ಕೇಂದ್ರಗಳನ್ನು ಸ್ಥಾಪಿಸಿ ಸಂಬಂದಪಟ್ಟ ಪಠ್ಯಕ್ರಮಗಳನ್ನು ಸೂಚಿಸಿ, ಈ ಕೇಂದ್ರಗಳನ್ನುತರಬೇತಿ ನೀಡುವ ಸಲುವಾಗಿ ಪ್ರತಿಷ್ಠಿತ **APTECH, NIIT,SSI** ಮತ್ತು **KEONICS** ಸಂಸ್ಥೆಗಳಿಗೆ ಹಂಚಿಕೆ ಮಾಡಲಾಯಿತು. ಈ ಯೋಜನೆಯು ೫ ವರ್ಷಗಳ ಅವಧಿಯಾಗಿದ್ದು ಸದರಿ ಯೋಜನೆಯುನ್ನು ಅನುಷ್ಠಾನಗೊಳಿಸುವ ನಿರ್ದೇಶಕರು, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಇಲಾಖೆ , ಇವರೊಡನೆ ಸದರಿ ಸಂಸ್ಥೆಗಳು ದಿನಾಂಕ **19.03.2001**ರಂದು ಅಲಾದಿಯಾಗಿ ಕರಾರು ಮಾಡಿಕೊಂಡಿರುತ್ತವೆ. ಹಾಗೂ ದಿನಾಂಕ **18.03.2006**ರ ಅಂತ್ಯಕ್ಕೆ ಯುವ.ಕಾಂ ಯೋಜನೆಯು ಮುಕ್ತಾಯಗೊಂಡಿರುತ್ತದೆ.

ಮೇಲೆ (2) ರಲ್ಲಿ ಓದಲಾದ ದಿನಾಂಕ **20.10.2005**ರ ಸರ್ಕಾರಿ ಆದೇಶದಲ್ಲಿ ಸದರಿ ಸಂಸ್ಥೆಗಳಿಗೆ ಸಹಾಯಾದಾನ ಪಾವತಿಸಲು ಬಾಕಿ ಇರುವ ಬಿಲ್ಲುಗಳನ್ನು ಪಾವತಿಸಲು ಹಾಗೂ ಈ ಬಗ್ಗೆ ಇತರೆ ವಿಷಯುಗಳನ್ನು ಇತ್ಯರ್ಥಗೊಳಿಸುವ ಸಲುವಾಗಿ ಉಪಸಮಿತಿಯೊಂದನ್ನು ರಚಿಸಲಾಗಿತ್ತು. ಸದರಿ ಉಪಸಮಿತಿಯು ವಿಷಯದ ಬಗ್ಗೆ ನೀಡಲಾದ ವರದಿಯನ್ನು ನಿರ್ದೇಶಕರು, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಇಲಾಖೆ, ಇವರು ಮೇಲೆ (3) ರಲ್ಲಿ ಓದಲಾದ ದಿನಾಂಕ **08.01.2006** ರ ಪತ್ರದೊಂದಿಗೆ ಸರ್ಕಾರಕ್ಕೆ ಸಲ್ಲಿಸುತ್ತಾ, ಯುವ.ಕಾಂ ಯೋಜನೆಯು ದಿನಾಂಕ **18.03.2006**ರ ಅಂತ್ಯಕ್ಕೆ ಮುಕ್ತಾಯಗೊಳ್ಳುವುದೆಂದು ಹಾಗೂ ಸದರಿ ಯೋಜನೆಗೆ ನೀಡಲಾಗಿರುವ ಮೂಲಭೂತ ಸೌಕರ್ಯವನ್ನು ಮೆಃ ಕಿಯೋನಿಕ್ಸ್ ಸಂಸ್ಥೆಯವರೇ ಯುವ.ಕಾಂ ಕೇಂದ್ರಗಳಿಗೆ ನೀಡಿದ್ದು , ಮೇಲ್ವಿಚಾರಣೆಯು ಸಹ (Maintenance, Insurence,etc.) ಸದರಿ ಸಂಸ್ಥೆಯೇ ಮಾಡುತ್ತಿರುವುದರಿಂದ ಉಪಸಮಿತಿಯು ತನ್ನ ವರದಿಯಲ್ಲಿ ಮಾಡಿರುವ ಶಿಫಾರಸ್ಸಿನಂತೆ ಈ ಯೋಜನೆಯುನ್ನು ಕಿಯೋನಿಕ್ಸ್ ಸಂಸ್ಥೆಗೆ ವರ್ಗಾಯಿಸಬೇಕೆಂದು ತಿಳಿಸಿ ಈ ಬಗ್ಗೆ ಆದೇಶ ಹೊರಡಿಸುವಂತೆ ಕೋರಿರುತ್ತಾರೆ.

ಈ ಬಗ್ಗೆ ದಿನಾಂಕ **16.03.2006**ರಂದು ಸರ್ಕಾರದ ಕಾರ್ಯದರ್ಶಿ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗು ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ, ಇವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಮೂಲಭೂತ ಸೌಕರ್ಯಗಳಿಗೆ ಸಂಬಂಧಿಸಿದಂತೆ ರೂ. **6.25** ಲಕ್ಷಗಳು ಹೊಂದಾಣಿಕೆಯಾಗಿರುವ ಕೇಂದ್ರಗಳನ್ನು ಹೊರತುಪಡಿಸಿ ಮಿಕ್ಕೆಲ್ಲ ಯುವ.ಕಾಂ ತರಬೇತಿ ಕೇಂದ್ರಗಳ ಮೂಲಭೂತ ಸೌಕರ್ಯಗಳನ್ನು ಹಿಂಪಡೆಯುವಂತೆ ಸೂಚಿಸಿ, ಕರ್ನಾಟಕ ರಾಜ್ಯ ವಿದ್ಯುನ್ಮಾನ ಅಭಿವೃದ್ಧಿ ನಿಗಮ ನಿಯಮಿತ, ಈ ಸಂಸ್ಥೆ ಸುಪರ್ದಿಗೆ ವರ್ಗಾಯಿಸುವಂತೆ ನಿರ್ಣಯಿಸಿದೆ.

ಮೇಲೆ **(1)** ರಲ್ಲಿ ಓದಲಾದ ದಿನಾಂಕ **06.12..2000** ಮತ್ತು **07.12..2000** ರ ಸರ್ಕಾರಿ ಆದೇಶಗಳ ಅನ್ವಯ ರಾಜ್ಯದ ಎಲ್ಲಾ ವಿಧಾನಸಭಾ ಕ್ಷೇತ್ರಗಳಲ್ಲಿ ಸ್ಥಾಪಿಸಲ್ಪಟ್ಟ **225** ಯುವ.ಕಾಂ ತರಬೇತಿ ಕೇಂದ್ರಗಳ ಅವಧಿಯ ದಿನಾಂಕ **18.03.2006**ರ ಅಂತ್ಯಕ್ಕೆ ಮುಕ್ತಾಯಗೊಳಿಸಲಿದ್ದು, ಸರ್ಕಾರಕ್ಕೆ ಸದರಿ ಕೇಂದ್ರಗಳ ಮೂಲಭೂತ ಸೌಕರ್ಯಗಳನ್ನು ಹಿಂತಿರುಗಿಸಬೇಕಾಗಿರುವ ಅಂಶವನ್ನು ಸರ್ಕಾರವು ಕೂಲಂಕುಷವಾಗಿ ಪರಿಶೀಲಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ : ಮಾತಂಇ 04 ನೀಸಂವಿ 2005, ಬೆಂಗಳೂರು, ದಿನಾಂಕ 25.11.2006.**

ರಾಜ್ಯದ ಎಲ್ಲಾ ಯುವ.ಕಾಂ ತರಬೇತಿ ಕೇಂದ್ರಗಳನ್ನು ಮೂಲಭೂತ ಸೌಕರ್ಯಗಳೊಂದಿಗೆ ಸರ್ಕಾರದ ಆರ್ಥಿಕ ಬೆಂಬಲ ರಹಿತವಾಗಿ ಕರ್ನಾಟಕ ರಾಜ್ಯ ವಿದ್ಯುನ್ಮಾನ ಅಭಿವೃದ್ಧಿ ನಿಗಮ ನಿಯಮಿತ ಸುಪರ್ದಿಗೆ ತೆಗೆದುಕೊಳ್ಳಲು ಮಂಜೂರಾತಿ ನೀಡಿದೆ. ಸದರಿ ಯುವ.ಕಾಂ ತರಬೇತಿ ಕೇಂದ್ರಗಳನ್ನು ಮುಂದುವರಿಸಲು ಕಿಯೋನಿಕ್ಸ್ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರೊಡನೆ ನೂತನವಾಗಿ ಕರಾರು ಮಾಡಿಕೊಳ್ಳುವಂತೆಯೂ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

– ಸಹಿ –

(ಬಿ. ರೇಣುಕಾಪ್ರಸಾದ್)
ಸರ್ಕಾರದ ಅಧೀನ ಕಾರ್ಯದರ್ಶಿ
ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ
ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ.